ಈಗ ಪತ್ತಿಯು ಸೀಜನ್ನು ಇದ್ದು ಅಲ್ಲಿ ಮೇಲಿಂದ ಮೇಲೆ ಗಿರಣಿಗಳಲ್ಲಿ ಬೆಂಕಿ ಹತ್ತಲಿಕ್ಕೆ ಹತ್ತಿರುತ್ತದೆ.

ಇದರಿಂದ ಅಲ್ಲಿ ಜನರಿಗೆ ಭಯ ಮತ್ತು ಟೆನ್ಷನ್ ಆಗಲಿಕ್ಕೆ ಹತ್ತಿದೆ. ಆದಕಾರಣ ಕೂಡಲೇ ಅಲ್ಲಿ ಒಂದು ಅಗ್ನಿಶಾಮಕದಳದ ಗಾಡಿಯನ್ನು ಕಳಿಸುವಂತೆ ಒಂದು ಗೃಹ ಮಂತ್ರಿಗಳ ಗಮನಸನ್ನು ತರುತ್ತೇನೆ. ಮುಖಾಂತರ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಮಂತ್ರಿಗಳಿಂದ ಉತ್ತರ ತರಿಸಿ ಕೊಡುತ್ತೇನೆ.

(೭) ಉಡುಪಿ ತಾಲ್ಲೂಕು ಪೆಜಮಂಗಳೂರು ಗ್ರಾಮದ ಬಚ್ಚೆಮರಕಾಲರುನಲ್ಲಿ ೧೯೭೫ರಲ್ಲಿ ಆಕ್ರಮ ಮಾಡಿದ ಜಮೀನನ್ನು ಸಕ್ರಮ ಮಾಡಿರುವುದು

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೆ, ಸರಕಾರಿ ಭೂಮಿಯನ್ನು ಆಕ್ರಮಿಸಿಕೊಂಡು ಅನು ಭವಿಸಿಕೊಂಡು ಬರುತ್ತಿರುವ ಭೂಹೀನರಿಗೆ ಅದನ್ನು ಸಕ್ರಮಗೊಳಿಸುವ ಕುರಿತು ಕಾನೂನು ತರುವು ದಾಗಿ ಮಾನ್ಯ ಕಂದಾಯ ಸಚಿವರು ಸದನದಲ್ಲಿ ತಿಳಿಸಿರುತ್ತಾರೆ. ಆಲ್ಲದೆ, ೧೯೭೯ರ ಹಿಂದೆ ಆಕ್ರಮಣ ಮಾಡಿಕೊಂಡಿರುವರಿಗೆ ಅವರ ಭೂಮಿಯನ್ನು ಸಕ್ರಮಗೊಳಿಸುವ ಆದೇಶವಿರುವುದಾಗಿ ತಿಳಿದು ಬಂದಿದೆ. ಆದರೆ ಉಡುಪಿ ತಾಲ್ಲೂಕಿನ ಪೆಜಮಂಗಳೂರು ಗ್ರಾಮದ ಬಚ್ಚೆಮರಕಾಲರು ೧೯೭೫ ಕ್ಕೂ ಹಿಂದಿನಿಂದ ಎರಡು ಎಕರೆ ಭೂಮಿಯನ್ನು ಅನುಭವ ಮಾಡಿಕೊಂಡಿದ್ದು ಅದರ ಸರ್ವೆ ರಿಕಾರ್ಡ್ ನಂ. ಡಿ. ಆರ್. ೨೧೪-೭೫/೭೬ ದಿನಾಂಕ ೧೮-೮-೧೯೭೬ ರಂದು ಆಗಿದ್ದರೂ ಈಗ ಅವರ ಫೈಲ್ ಇಲ್ಲ ಅಂತೆಲೂ ಆಲ್ಲದೆ, ಆ ಭೂಮಿಯನ್ನು ಬೇರೆಯವರಿಗೆ ಕೊಡುವ ಹಂಚಿಕೆ ಕೂಡ ಆಗುತ್ತಿದ್ದು ಇದು ಬಡವರಿಗೆ ಆಗುತ್ತಿರುವ ಅನ್ಯಾಯ. ಇದನ್ನು ಕೂಡಲೇ ಸರಿಪಡಿಸಿ ಕೊಡ ಬೇಕಾಗಿ ಮಾನ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಕಂದಾಯ ಮಂತ್ರಿಯವರಿಂದ ವರದಿ ತರಿಸಿ ಉತ್ತರ ಕೊಡುತ್ತೇನೆ.

(೮) ಸರ್ಕಾರದಲ್ಲಿರುವ ೧೬೦೦ ಪ್ರಥಮ ದರ್ಜೆ ಗುಮಾಸ್ತರ ಹುದ್ದೆಗಳನ್ನು ಭರ್ತಿ ಮಾಡುವುದು

ಶ್ರೀ ಕೆ. ಜೆಜ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ೧೯೮೬ರ ಜೂನ್ ತಿಂಗಳಲ್ಲಿ ಸರಕಾರಿ ಪ್ರಥಮ ದರ್ಜೆ ಗುಮಾಸ್ತರ ಹುದ್ದೆಗಳಿಗೆ ಪರೀಕ್ಷೆ ನಡೆಯಿತು. ಪರೀಕ್ಷೆಗೆ ಸುಮಾರು ೮೫,೦೦೦ ಜನ ಅಭ್ಯರ್ಥಿ ಗಳು ಹಾಜರಾಗಿದ್ದರು. ರಾಜ್ಯದಲ್ಲಿ ೧೬೦೦ ಖಾಲಿ ಹುದ್ದೆಗಳಿದ್ದರೂ. ಈ ಸರಕಾರ ಕೇವಲ ೧೫೦೦ ಹುದ್ದೆಗಳನ್ನು ಮಾತ್ರ ತುಂಬಲು ನಿರ್ಧರಿಸಿದ್ದಾರೆಂದು ನನಗೆ ಕೆಲವು ಅರ್ಹ ಪದವೀದರರು ಬರೆದಿದ್ದಾರೆ. ಅದರಲ್ಲಿಯೂ ಹಿರ್ವ ಶ್ರೀ ಹಿಪ್ಪೇಸ್ವಾಮಿ, ಎಂ. ಕಾಂ. ಕಳವಿಜಾಗಿ, ಹಿರಿಯೂರು ತಾಲ್ಲೂಕು ಅವರು ಒಂದು ಪತ್ರ ಬರೆದು ತಮಗೀಗ ಉಳಿದಿರುವುದು ವಿಷಸೇವನೆಯೊಂದೇ ಎಂದು ಪತ್ರದಲ್ಲಿ ಬರೆದಿದ್ದಾರೆ. ಇಂಥವರು ಎಷ್ಟು ಜನರಿರುವರೋ ? ಸೈಕೃಫೆಂಡರೀ ಸ್ಕೀಮು ಕೂಡ ಫಲಪ್ರಧವಾಗದಾಗಿರುತ್ತದೆ. ಆದ್ದರಿಂದ ಸರಕಾರದವರು ಈ ನಿರುದ್ಯೋಗಿ ಪದವೀಧರರ ಕಲ್ಯಾಣ ಕ್ರಮದ ಅಂಗವಾಗಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಪ್ರಯತ್ನಿಸುವಿರಾ ? ಇದನ್ನು ಸರಕಾರದ ವೆಂದ ಸ್ಪಷ್ಟೀಕರಣ ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪ್ರಥಮ ದರ್ಜೆ ಸಹಾಯಕರ ಸುಮಾರು ೧೩೦೦ ಹುದ್ದೆಗಳು ಖಾಲಿಯಿದ್ದುದರಿಂದ ಈ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗವು ಜೂನ್ ೧೯೮೬ ರಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸಿತು. ಈ ಪರೀಕ್ಷೆಗೆ ಸುಮಾರು ೮೫೦೦೦ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದರು. ಇವರುಗಳಲ್ಲಿ ಅರ್ಹರಾದ ಕೇವಲ ೧೩೦೦ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇರುವ ಇತರ ಹುದ್ದೆಗಳನ್ನು ನೇರ ನೇರ ನೇಮಕಾತಿ ಸಮಿತಿಗಳು ಮತ್ತು ಲೋಕ ಸೇವಾ ಆಯೋಗದ ಮುಖಾಂತರ ನೇಮಕಾತಿ ನಿಯಮ ಮತ್ತು ಮೀಸಲಾತಿಯನ್ನು ಆದರಿಸಿ ತುಂಬಿಕೆ ಕಾಗು ವುದು. ಆದುದರಿಂದ ಖಾಲಿಯಿರುವ ಎಲ್ಲಾ ಹುದ್ದೆಗಳನ್ನು ವಿಕಕಾಲದಲ್ಲಿ ತುಂಬಲು ಸಾಧ್ಯವಾಗಿ ಲಾರದು.